# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2017-18ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ನೂತನವಾಗಿ ಮಂಜೂರಾಗಿರುವ **ಮೈಸೂರು ವಿಭಾಗದ** ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು ಪ್ರಾರಂಭಿಸಲು ಖರ್ಚು ವೆಚ್ಚಕ್ಕೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 169 ಎಂಡಿಎಸ್ 2017 ದಿನಾಂಕ: 06.04.2017
2. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 169 ಎಂಡಿಎಸ್ 2017 ದಿನಾಂಕ: 25.04.2017

******

**ಪ್ರಸ್ತಾವನೆ:-**

ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ 2016-17 ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2017-18 ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ರೂ.3317.75 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ನೂತನವಾಗಿ ಮಂಜೂರಾಗಿರುವ **ಮೈಸೂರು ವಿಭಾಗದ** 17 ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು ಪ್ರಾರಂಭಿಸಲು ಅತಿ ಅವಶ್ಯವಿರುವ ಸಾಮಾಗ್ರಿಗಳಾದ ಅಡುಗೆ ಮನೆಯ ಸಲಕರಣೆಗಳು (ತಟ್ಟೆ, ಲೋಟ, ಸ್ಟಾಂಡ್, ಗ್ಯಾಸ್ ಒಲೆ, ಗ್ಯಾಸ್ ಸಂಪರ್ಕ), ಕಛೇರಿ ಸ್ಟೇಶನರಿ (ಸೀಮೆಸುಣ್ಣ, ಪೇಪರ್, ರಿಜಿಸ್ಟರ್ಸ್, ಡೆಸ್ಟರ್ ಇತ್ಯಾದಿ), ಪೀಠೋಪಕರಣ ಹಾಗೂ ಸುಣ್ಣಬಣ್ಣ, ಸಣ್ಣ ಪುಟ್ಟ ರಿಪೇರಿ ಮುಂತಾದ ವೆಚ್ಚಗಳನ್ನು ಭರಿಸಲು ಒಟ್ಟು ರೂ.34.00ಲಕ್ಷ (ಮೂವತ್ನಾಲ್ಕು ಲಕ್ಷ ರೂ.ಗಳು ಮಾತ್ರ)ಗಳ ಅನುದಾನ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

## ಆದೇಶ

**ಸಂಖ್ಯೆ: ಅಸಂನಿ/ಮೌಶಾ/ಅನುದಾನ/ಸಿಆರ್-67/ಮೈ/2017-18** **ದಿನಾಂಕ: 28.06.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ನೂತನವಾಗಿ ಮಂಜೂರಾಗಿರುವ **ಮೈಸೂರು ವಿಭಾಗದ** 17 ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು ಪ್ರಾರಂಭಿಸಲು ಅತಿ ಅವಶ್ಯವಿರುವ ಸಾಮಾಗ್ರಿಗಳಾದ ಅಡುಗೆ ಮನೆಯ ಸಲಕರಣೆಗಳು (ತಟ್ಟೆ, ಲೋಟ, ಸ್ಟಾಂಡ್, ಗ್ಯಾಸ್ ಒಲೆ, ಗ್ಯಾಸ್ ಸಂಪರ್ಕ), ಕಛೇರಿ ಸ್ಟೇಶನರಿ (ಸೀಮೆಸುಣ್ಣ, ಪೇಪರ್, ರಿಜಿಸ್ಟರ್ಸ್, ಡೆಸ್ಟರ್ ಇತ್ಯಾದಿ), ಪೀಠೋಪಕರಣ ಹಾಗೂ ಸುಣ್ಣಬಣ್ಣ, ಸಣ್ಣ ಪುಟ್ಟ ರಿಪೇರಿ ಮುಂತಾದ ವೆಚ್ಚಗಳನ್ನು ಭರಿಸಲು ಒಟ್ಟು **ರೂ.34.00ಲಕ್ಷ (ಮೂವತ್ನಾಲ್ಕು ಲಕ್ಷ ರೂ.ಗಳು ಮಾತ್ರ)**ಗಳಅನುದಾನ ಆಯಾ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ** ರವರಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:-**

1) ಆದೇಶಲ್ಲಿ ಯಾವ ಉದ್ದೇಶ/ಖರೀದಿಗೆ ಅನುದಾನ ಬಿಡುಗಡೆ ಮಾಡಲಾಗಿದೆಯೋ ಆ ಉದ್ದೇಶಕ್ಕೆ ಮಾತ್ರ ಬಳಸತಕ್ಕದ್ದು.
2) ಎಲ್ಲಾ ಖರ್ಚು-ವೆಚ್ಚವನ್ನು ಕೆ.ಟಿ.ಪಿ.ಪಿ ಕಾಯ್ದೆ ಪ್ರಕಾರ ನಿಯಮಾನುಸಾರ ಖರೀದಿಸತಕ್ಕದ್ದು.
3) ಖರೀದಿಸಿರುವ ಸಾಮಾಗ್ರಿಗಳು ಗುಣಮಟ್ಟದ್ದಾಗಿರಬೇಕು ಹಾಗೂ ಕಡ್ಡಾಯವಾಗಿ ದಾಸ್ತಾನು ವಹಿಯಲ್ಲಿ ನಮೂದಿಸಿ ನಿರ್ವಹಿಸಬೇಕು

ರವಾನಿಸಿದೆ
ದಿನಾಂಕ 1/7/17

Contd....2

4) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಖರ್ಚು ಭರಿಸಿರುವ ಅನುದಾನದ ವಿವರ, (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-03-277-2-80 ಆಬ್ಜೆಕ್ಟ್ ಕೋಡ್ (059) ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆ ರಾಜ್ಯವಲಯ ಯೋಜನೆಯಡಿ 2017-18ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯದಲ್ಲಿ ಭರಿಸತಕ್ಕದ್ದು.

(ಅಕ್ರಂ ಪಾಷ)
ನಿರ್ದೇಶಕರು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು.

<u>ಪ್ರತಿಯನ್ನು:-</u>

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕೀಕರಣ ಕೇಂದ್ರ, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಗತ್ಯಕ್ರಮಕ್ಕಾಗಿ ಹಾಗೂ ಸಂಬಂದಪಟ್ಟ ಶಾಲೆಗಳ ಪ್ರಾಂಶುಪಾಲರಿಗೆ (ಜಿಲ್ಲಾ ಅಧಿಕಾರಿಗಳ ಮೂಲಕ)
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು.
7. ಲೆಕ್ಕಪತ್ರ ಶಾಖೆ.
8. ಹೆಚ್ಚುವರಿ ಪ್ರತಿ
9. ಕಛೇರಿ ಪ್ರತಿ.

**ಅನುಬಂಧ**

**ಅಲ್ಪಸಂಖ್ಯಾತರ ನಿರ್ದೇಶನಾಲಯ**

**ಸಂಖ್ಯೆ: ಅಸಂನಿ/ಮೌಶಾ/ಅನುದಾನ/ಸಿಆರ್-67/ಮೈ/2017-18** **ದಿನಾಂಕ:28.06.2017**

**ಮೈಸೂರು ವಿಭಾಗ** **(ರೂ.ಲಕ್ಷಗಳಲ್ಲಿ)**

| ಕ್ರ.ಸ | ಜಿಲ್ಲೆ | ಕ್ರ.ಸ | ತಾಲ್ಲೂಕು | ಅಡುಗೆಮನೆ ಸಲಕರಣೆಗಳು | ಕಛೇರಿ ವೆಚ್ಚ, ಪೀಠೋಪಕರಣ | ಒಟ್ಟು |
|---|---|---|---|---|---|---|
| 1 | ಚಾಮರಾಜನಗರ | 1 | ಚಾಮರಾಜನಗರ | 1.00 | 1.00 | 2.00 |
| 2 | ಚಿಕ್ಕಮಗಳೂರು | 2 | ಚಿಕ್ಕಮಗಳೂರುನಗರ | 1.00 | 1.00 | 2.00 |
| | | 3 | ತರೀಕೆರೆ (ಅಜ್ಜಂಪುರ) | 1.00 | 1.00 | 2.00 |
| 3 | ದಕ್ಷಿಣ ಕನ್ನಡ | 4 | ಮಂಗಳೂರು ನಗರ | 1.00 | 1.00 | 2.00 |
| | | 5 | ಪುತ್ತೂರು | 1.00 | 1.00 | 2.00 |
| | | 6 | ಉಳ್ಳಾಲ | 1.00 | 1.00 | 2.00 |
| | | 7 | ಬಂಟ್ವಾಳ | 1.00 | 1.00 | 2.00 |
| 4 | ಹಾಸನ | 8 | ಹಾಸನ | 1.00 | 1.00 | 2.00 |
| | | 9 | ಚನ್ನರಾಯಪಟ್ಟಣ | 1.00 | 1.00 | 2.00 |
| | | 10 | ಅರಸೀಕೆರೆ | 1.00 | 1.00 | 2.00 |
| 5 | ಕೊಡಗು | 11 | ಕುಶಾಲನಗರ | 1.00 | 1.00 | 2.00 |
| 6 | ಮೈಸೂರು | 12 | ಮೈಸೂರು ನಗರ | 1.00 | 1.00 | 2.00 |
| | | 13 | ಮೈಸೂರು ನಗರ | 1.00 | 1.00 | 2.00 |
| | | 14 | ಪಿರಿಯಾಪಟ್ಟಣ (ಹಲಗನಹಳ್ಳಿ) | 1.00 | 1.00 | 2.00 |
| | | 15 | ಹುಣಸೂರು | 1.00 | 1.00 | 2.00 |
| 7 | ಮಂಡ್ಯ | 16 | ಮಂಡ್ಯ ನಗರ | 1.00 | 1.00 | 2.00 |
| 8 | ಉಡುಪಿ | 17 | ಉಡುಪಿ ನಗರ | 1.00 | 1.00 | 2.00 |
| ಒಟ್ಟು | | | | | | **34.00** |

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು